ಕರ್ನಾಟಕ ಸರ್ಕಾರ

ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ:ಬಿಟಿಇ/06/ಇಸಿಎಸ್(1)/2024


ಆಯುಕ್ತರವರ ಕಛೇರಿ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಅರಮನೆ ರಸ್ತೆ, ಬೆಂಗಳೂರು -560001
ದೂರವಾಣಿ ಸಂಖ್ಯೆ:080-2220777
email:dte.commissioner@gmail.com


ದಿನಾಂಕ:10.12.2024

## ಸುತ್ತೋಲೆ

ವಿಷಯ: ನವೆಂಬರ್/ಡಿಸೆಂಬರ್ 2024 ರ ಡಿಪ್ಲೋಮ ಸೆಮಿಸ್ಟರ್ ಥಿಯರಿ ಪರೀಕ್ಷೆಯ ದಿ:11.12.2024 ರಂದು ಜರುಗಬೇಕಾದ ಎಲ್ಲಾ ಥಿಯರಿ ವಿಷಯಗಳ ಪರೀಕ್ಷೆಯನ್ನು ಮುಂದೂಡಿರುವ ಬಗ್ಗೆ.

ಉಲ್ಲೇಖ: ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿಸುಆ/35/ಹೆಚ್‌ಹೆಚ್‌ಎಲ್/2024 ದಿನಾಂಕ:10.12.2024

**********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಸರ್ಕಾರದ ಅಧಿಸೂಚನೆಯಲ್ಲಿ ಕರ್ನಾಟಕ ರಾಜ್ಯದ ಮಾಜಿ ಮುಖ್ಯಮಂತ್ರಿ ಹಾಗೂ ಕೇಂದ್ರ ಸಚಿವರಾಗಿದ್ದ ಶ್ರೀ ಎಸ್.ಎಂ.ಕೃಷ್ಣ ರವರ ನಿಧನದ ಪ್ರಯುಕ್ತ ತೀವ್ರ ಸಂತಾಪ ಸೂಚಿಸಿ ದಿವಂಗತರ ಗೌರವಾರ್ಥ ದಿನಾಂಕ:11.12.2024 ರ ಬುಧವಾರದಂದು ರಾಜ್ಯಾದ್ಯಂತ ಎಲ್ಲಾ ಸರ್ಕಾರಿ ಕಚೇರಿಗಳಿಗೆ ಮತ್ತು ಎಲ್ಲಾ ಶಾಲಾ ಕಾಲೇಜುಗಳಿಗೆ ಸಾರ್ವಜನಿಕ ರಜೆಯನ್ನು ಘೋಷಿಸಲಾಗಿರುತ್ತದೆ. **ಈ ಹಿನ್ನೆಲೆಯಲ್ಲಿ, ದಿನಾಂಕ:11.12.2024 ರಂದು ಎಲ್ಲಾ ಸರ್ಕಾರಿ/ ಖಾಸಗಿ ಅನುದಾನಿತ/ಖಾಸಗಿ ಪಾಲಿಟೆಕ್ನಿಕ್ ಪರೀಕ್ಷಾ ಕೇಂದ್ರಗಳಲ್ಲಿ ನಡೆಯಬೇಕಾಗಿದ್ದ ಎಲ್ಲಾ ಥಿಯರಿ ಪರೀಕ್ಷೆಗಳನ್ನು ದಿನಾಂಕ:17.12.2024ಕ್ಕೆ ಮುಂದೂಡಲಾಗಿದೆ. ಪರೀಕ್ಷಾ ಸಮಯದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ**.

ಇನ್ನುಳಿದಂತೆ ಪರೀಕ್ಷಾ ವೇಳಾಪಟ್ಟಿಯಲ್ಲಿ ಬೇರೆ ಯಾವುದೇ ಬದಲಾವಣೆ ಇರುವುದಿಲ್ಲವೆಂದು ಹಾಗೂ ಈ ವಿಷಯವನ್ನು ವಿದ್ಯಾರ್ಥಿಗಳು / ಉಪನ್ಯಾಸಕರುಗಳು / ಪೋಷಕರುಗಳ ಗಮನಕ್ಕೆ ತಪ್ಪದೇ ತರುವಂತೆ ಎಲ್ಲಾ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರುಗಳಿಗೆ ಸೂಚಿಸಲಾಗಿದೆ.

ಕಾರ್ಯದರ್ಶಿ

ಇವರಿಗೆ,

ರಾಜ್ಯದ ಎಲ್ಲಾ ಪರೀಕ್ಷಾ ಕೇಂದ್ರಗಳ ಪ್ರಾಂಶುಪಾಲರುಗಳು/ ಮುಖ್ಯ ಅಧೀಕ್ಷಕರು/ ಮುಖ್ಯ ವೀಕ್ಷಕರು/ ಉಪ ಮುಖ್ಯ ಅಧೀಕ್ಷಕರುಗಳಿಗೆ – ಮಾಹಿತಿಗಾಗಿ ಮತ್ತು ಸೂಚನಾ ಫಲಕದಲ್ಲಿ ಪ್ರಕಟಿಸಲು ಹಾಗೂ ಪರೀಕ್ಷಾ ಕೊಠಡಿಗಳಲ್ಲಿ ಪರಿಚಲನೆ ಮೂಲಕ ಪ್ರಚುರಪಡಿಸಲು

ಪ್ರತಿ:

1. ಶ್ರೀ ಹರೀಶ್ ಶೆಟ್ಟಿ, ಪ್ರಾಂಶುಪಾಲರು, ಕರ್ನಾಟಕ ಸರ್ಕಾರಿ ಪಾಲಿಟೆಕ್ನಿಕ್, ಮಂಗಳೂರು –ಅಗತ್ಯ ಕ್ರಮಕ್ಕಾಗಿ
2. ಮಾನ್ಯ ಆಯುಕ್ತರ ಆಪ್ತ ಶಾಖೆ, ಕಾ.&ತಾಂ.ಶಿ.ಇಲಾಖೆ –ಮಾಹಿತಿಗಾಗಿ
3. ಮಾನ್ಯ ನಿರ್ದೇಶಕರ ಆಪ್ತಶಾಖೆ –ಮಾಹಿತಿಗಾಗಿ
4. ವಿಚಕ್ಷಣಾಧಿಕಾರಿಗಳು –ಮಾಹಿತಿಗಾಗಿ
5. ಸಾರ್ವಜನಿಕ ಸಂಪರ್ಕಾಧಿಕಾರಿ. ತಾಂ.ಶಿ.ಇಲಾಖೆ ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ
6. ಇ-ಗವರ್ನೆನ್ಸ್ ವಿಭಾಗ –ವೆಬ್‌ಸೈಟ್‌ನಲ್ಲಿ ಪ್ರಕಟಿಸಲು
7. ಗಣಕ ಕೇಂದ್ರ- ವೆಬ್‌ಪೋರ್ಟಲ್‌ನಲ್ಲಿ ಪ್ರಕಟಿಸಲು ಮತ್ತು ಅಗತ್ಯ ಕ್ರಮಕ್ಕಾಗಿ 8. ಕಾರ್ಯದರ್ಶಿಯವರ ಆಪ್ತ ಶಾಖೆ